## ಸೂಕ್ತಿಪ್ರಭ

ನಿಮ್ಮ ಅತಿ ದೊಡ್ಡ ಪ್ರತಿಸ್ಪರ್ಧಿಯೇ ನಿಮ್ಮ ಭವಿಷ್ಯದ ಬಗೆಗಿನ ನಿಮ್ಮ ದೃಷ್ಟಿ.

—ವಾಟ್ಸ್ ವಾಕರ್ ಮತ್ತು ಜಿಮ್ ಟೈಲರ್

ಪ್ರಮುಖನಾಗಿರುವುದು ಒಳ್ಳೆಯದು. ಆದರೆ ಇನ್ನೂ ಪ್ರಮುಖವಾದುದು ಒಳ್ಳೆಯವನಾಗಿರುವುದು.

ಯಾರು ತನ್ನ ಹೃದಯದಲ್ಲಿ ಇತರರಿಗೆ ಜಾಗ ಮಾಡಿ ಕೊಡುತ್ತಾನೊ ಅವನಿಗೆ ಎಲ್ಲೆಲ್ಲಿಯೂ ವಸತಿ ಸೌಲಭ್ಯ ದೊರೆಯುತ್ತದೆ.

—ಇನ್ನತ್ ಖಾನ್

ನಾನು ಕೆಲಸ ಮಾಡಿದಾಗ ದೇವರು ನನ್ನನ್ನು ಗೌರವಿಸುತ್ತಾನೆ, ಆದರೆ ನಾನು ಹಾಡಿದಾಗ ಪ್ರೀತಿಸುತ್ತಾನೆ.

—ರವೀಂದ್ರನಾಥ ಠಾಕೂರ್

ತನ್ನನ್ನು ತಾನು ಗೆಲ್ಲುವುದೇ ನಿಜವಾದ ಪರಾಕ್ರಮ; ನೋವು ನಲಿವುಗಳನ್ನು ಮೀರಿ ಹೋಗುವುದೇ ನಿಜವಾದ ಸುಖ; ಇಂದ್ರಿಯ ಸುಖಕ್ಕಾಗಿ ಹಾತೊರೆಯುವುದೇ ದುಃಖ.

—ಭಾಗವತ ಪುರಾಣ

ಮಾತನಾಡುವ ಗಿಳಿ ಪಂಜರದಲ್ಲಿ ಬಂಧಿತವಾಗಿರುತ್ತದೆ. ಮಾತು ಬಾರದ ಪಕ್ಷಿ ಸ್ವತಂತ್ರವಾಗಿ ಹಾರಾಡಿಕೊಂಡಿರುತ್ತದೆ.

—ಟಿಬೆಟನ್ ಯೋಗಿ

ಪ್ರತಿದಿನವೂ ನಾವು ಹೇಗೆ ಬಾಳಬೇಕೆಂದರೆ ನಾವು ಭಗವಂತನನ್ನು ಕಾಣಲು ಹೋಗುತ್ತಿದ್ದೇವೆ ಎನ್ನುವ ರೀತಿಯಲ್ಲಿ.

—ಫಿಲೋಥಿಯಸ್

ಸದವಕಾಶದ ಕಿಟಕಿಯು ತಾನೇ ತೆರೆಯುವುದಿಲ್ಲ.

—ದಾವೆ ವೀನ್‌ಬಾಮ್

## ಪ್ರಾರ್ಥನೆ

ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ
ವಿಶ್ವತೋ ಬಾಹುರುತ ವಿಶ್ವತಸ್ಪಾತ್ ।
ಸಂ ಬಾಹುಭ್ಯಾಂ ಧಮತಿ ಸಂ ಪತತ್ರೈ
ರ್ದ್ಯಾವಾಭೂಮೀ ಜನಯನ್ ದೇವ ಏಕಃ ॥

ಸರ್ವತ್ರ ಪ್ರಸರಿಸಿದ ಕಣ್ಣುಗಳುಳ್ಳವನೂ, ಸರ್ವತ್ರ ಹೊಂದಿರತಕ್ಕ ಮುಖಗಳುಳ್ಳವನೂ, ಸರ್ವತ್ರ ಚಾಚಿದ ಬಾಹುಗಳುಳ್ಳವನೂ, ಎಲ್ಲ ಕಡೆಯೂ ನೀಡಿದ ಪಾದಗಳುಳ್ಳವನೂ ಆದ ಈಶ್ವರನು ತನ್ನ ಬಾಹುಗಳಿಂದ ದ್ಯುಲೋಕವನ್ನು ಪ್ರೇರಿಸುತ್ತಾನೆ. ಚಲಿಸುವ ಪಾದಗಳಿಂದ ಪೃಥ್ವಿಯನ್ನು ಪ್ರೇರಿಸುತ್ತಾನೆ. ದ್ಯಾವಾಪೃಥಿವಿಗಳನ್ನು ಉತ್ಪನ್ನ ಮಾಡುತ್ತಾ ಅದ್ವಿತೀಯವಾಗಿ ಪ್ರಕಾಶಿಸುತ್ತಾನೆ.

(ಋಗ್ವೇದ, ೧೦.೬.೮೧.)

ವಾಚಸ್ಪತಿಂ ವಿಶ್ವಕರ್ಮಾಣಮೂತಯೇ
ಮನೋಜುವಂ ವಾಜೇ ಅದ್ಯಾ ಹುವೇಮ ।
ಸ ನೋ ವಿಶ್ವಾನಿ ಹವನಾನಿ ಜೋಷದ್
ವಿಶ್ವಶಂಭೂರವಸೇ ಸಾಧುಕರ್ಮಾ ॥

ಮಂತ್ರರೂಪವಾಗ ವಾಕ್ಕುಗಳಿಗೆ ಒಡೆಯನೂ, ಸಕಲ ಜಗತ್ತಿನ ನಿರ್ಮಾಪಕನೂ, ಮನಸ್ಸಿನಂತೆ ವೇಗವುಳ್ಳವನೂ ಆದ ವಿಶ್ವಕರ್ಮನನ್ನು ಈಗ ಯಜ್ಞದಲ್ಲಿ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯೋಣ. ಎಲ್ಲರಿಗೂ ಮಂಗಳವನ್ನುಂಟುಮಾಡುವವನೂ, ಉತ್ತಮವಾದ ಕರ್ಮವುಳ್ಳವನೂ ಆದ ವಿಶ್ವಕರ್ಮದೇವನು ನಮ್ಮ ಸಕಲ ಆಹುತಿಗಳಿಂದ ಸುಪ್ರೀತನಾಗಿ ನಮ್ಮನ್ನು ರಕ್ಷಿಸಲಿ.

(ಋಗ್ವೇದ, ೧೦.೭.೮೧.)

ಪರಿತ್ವಾಗ್ನೇ ಪುರಂ ವಯಂ
ವಿಪ್ರಸಹಸ್ಯ ಧೀಮಹಿ ।
ಧೃಷದ್ವರ್ಣಂ ದಿವೇ ದಿವೇ
ಹಂತಾರಂ ಭಂಗುರಾವತಾಮ್ ॥

ಶಕ್ತಿಪುತ್ರನಾದ ಎಲೈ ಅಗ್ನಿಯೆ, ಕರ್ಮನಿರ್ವಾಹಕನೂ ಮೇಧಾವಿಯೂ ಭಯಂಕರವಾದ ರೂಪವುಳ್ಳವನೂ ಯಜ್ಞ ನಾಶಕರಾದ ರಾಕ್ಷಸರನ್ನು ಪ್ರತಿದಿನವೂ ನಾಶಮಾಡುವವನೂ ಆದ ನಿನ್ನನ್ನು ನಾವು ಧ್ಯಾನರೂಪದಲ್ಲಿ ಪೂಜಿಸುತ್ತೇವೆ.

(ಋಗ್ವೇದ, ೧೦.೭.೮೭.)